ಹೆಜ್ಜೆಗಳನ್ನೆತ್ತುತ್ತಿ ನನ್ನ ಕೋಣೆ ಸೇರಿ ಮಲಗಿಬಿಟ್ಟೆ. ರಾತ್ರಿ ಅಮ್ಮ ತಂದ ಹಾಲನ್ನು ಕುಡಿಯಲೇ ಬೇಕಾಯಿತು. ಯಾರಿಗೂ– ಯಾರಿಗೂ ಈ ವಿಷಯ ಗೊತ್ತಾಗುವುದು ಬೇಡ ಎಂಬ ನಿರ್ಧಾರ ಮನದಲ್ಲೇ ಗಟ್ಟಿ ಮಾಡಿಕೊಂಡೆ. ನನ್ನ ನೋವು–ದುಃಖ ಈ ಕತ್ತಲೆಯೊಂದಿಗೆ ನನ್ನೊಟ್ಟಿಗೇ ಇರಲಿ ಎನ್ನುವ ಛಲ ನನ್ನನ್ನು ಬದುಕಿಸಿತು.

ಮರುದಿನ, ಆದರ ಮರುದಿನ ಎಷ್ಟೇ ಮಂಕು ಆವರಿಸಿದ್ದರೂ ಸಹಜವಾಗಿರಲು ಯತ್ನಿಸಿದೆ. ಎಂದಿನ ಹಾಗೆ – ಸ್ವರ ಹಿಡಿದು ತನ್ಮಯಳಾಗಲು ಯತ್ನಿಸಿದೆ. ಆದರೆ ಕದಡಿದ ಮನಸ್ಸಿನಲ್ಲಿ ಸಂಗೀತ ಮೂಡದೇ ವೀಣೆಯ ಮನೆ ಮುಟ್ಟಿದರೆ ಅಪಸ್ವರ, ವೀಣೆಯ ತಂತಿಗಳು ಕರುಳಬಳ್ಳಿಯ ಕೊಯ್ದ ಹಾಗೆ. ಯಾವ ದೇವರಲ್ಲಿ ನನ್ನ ನೋವಿನ ಮೊರೆಯಿಡಬಹುದಿತ್ತು ನಾನು? ಯಾವ ಗೆಳೆಯರಿದ್ದರು ನನಗಲ್ಲಿ? ಆಗ ನನಗೆ ನಾನೇ ದೇವರಾದೆ – ಗೆಳೆಯನಾದೆ, ಏನಾದರೂ ಸರಿ ಬದುಕುವ ಹತಾಶೆ ತುಂಬಿಕೊಂಡೆ.

ಆದರೆ ಇಷ್ಟಕ್ಕೇ ನಿಲ್ಲಲಿಲ್ಲ. ಚೈತ್ರ, ಆ ನಂಜಿನ ವ್ಯಕ್ತಿ ನನ್ನ ಮನೆಗೆ ಬರಲಾರಂಭಿಸಿದ. ಇದ್ಯಾವುದರ ಪರಿವೆಯಿಲ್ಲದ ಅಪ್ಪ ಆತನನ್ನು ಪ್ರೀತಿಯಿಂದ ಸತ್ಕರಿಸಿದಾಗ ನನಗೆ ಸತ್ತು ಹೋಗುವ ಹಾಗಾಗುತ್ತಿತ್ತು. ಆ ವ್ಯಕ್ತಿ ನನ್ನನ್ನೇ ನಂಜುಗಣ್ಣುಗಳಿಂದ ನೋಡಿದಾಗಲಂತೂ ನೆಲಕುಸಿದು ಹೋಗುತ್ತಿತ್ತು. ನಡೆದದ್ದನ್ನು ಅಪ್ಪನಿಗೆ ಹೇಳಿದರೆ ನನ್ನೆದೆಯೊಡೆದು ಚೂರಾಗುತ್ತಿತ್ತು. ಅಪ್ಪ ಈ ಆಘಾತ ಸಹಿಸಿ ಬದುಕಬಲ್ಲನೆ? ದೇವರೆ, ಇದೆಂಥ ಪರೀಕ್ಷೆ? ಬೆಂದು ಹೋಗುವ ಯಾತನೆ? ನನ್ನನ್ನು ನೋಡುತ್ತ ಆ ವ್ಯಕ್ತಿ ಮಾಡುತ್ತಿದ್ದ ವಿಕೃತ ಇಷಾರೆಗಳು ಎದೆ ನಡುಗಿಸುತ್ತಿದ್ದವು. ಅವನು ಮನೆಯಿಂದ ಹೊರಹೋದಾಗ ನಾನು ಮರುಜನ್ಮ ಪಡೆದವಳಂತೆ ನಿಟ್ಟುಸಿರಿಡುತ್ತಿದ್ದೆ...

★★★

ಯಾಕೆ ಚೈತ್ರ? ತಟ್ಟನೆ ಮಾತು ನಿಲ್ಲಿಸಿದ್ದಕ್ಕೆ ಭಯವಾಯಿತೆ? ಭಯಪಡಬೇಡ. ಹೇಳಿದೆನಲ್ಲ ನಾನೆಷ್ಟು ಬಲಹೀನಳೋ ಅಷ್ಟೇ ಗಟ್ಟಿ ಎಂದು. ಸ್ವಲ್ಪ ತಾಳು. ಇನ್ನೂ ಘೋರವಾದುದ್ದನ್ನು ನಿನಗೆ ತಿಳಿಸಲು ಮನಸ್ಸು ಗಟ್ಟಿ ಮಾಡಿಕೊಳ್ಳುತ್ತಿದ್ದೇನೆ. ಈವರೆಗೆ ನನ್ನೊಳಗೆ ಹುತ್ತದ ಹಾಗೆ ಹುಗಿದು ಹೋಗಿರುವ ಈ ಕಠೋರ ಸತ್ಯಗಳ ಹೊರತೆಗೆಯಲು ಸ್ವಲ್ಪ ಕಷ್ಟವಾಗುತ್ತಿದೆ. ನೀನೇನೂ ಆತಂಕ ಮಾಡಿಕೊಳ್ಳಬೇಡ. ಅಂಥ ಘೋರತೆಯನ್ನು ದಾಟಿಬಂದಿರುವ ನಾನೇ ಧೈರ್ಯದಿಂದ ನಿರಾತಂಕವಾಗಿರುವಾಗ ನೀನೇಕೆ ಬೆವರುತ್ತಿದ್ದೀಯ. ನಿನ್ನ ಕಣ್ಣಲ್ಲೇಕೆ ನೀರು? ಆದರೆ... ನಿಜ ಹೇಳಲೇ ಚೈತ್ರ; ನನ್ನ ದುಃಖಕ್ಕೆ ಕಣ್ಣೀರು ಮಿಡಿಯುವ ಹೃದಯವಂತನನ್ನು ಕಂಡು ನನಗೆ ನಿಜವಾಗಿಯೂ ಖುಷಿಯಾಗುತ್ತಿದೆ; ಹೆಮ್ಮೆಯೆನಿಸುತ್ತಿದೆ. ನಿನ್ನ ಸ್ನೇಹಕ್ಕೆ ಕೃತಜ್ಞತೆಗಳು ಚೈತ್ರ.

ಹಾಂ! ಏನು ಹೇಳುತ್ತಿದ್ದೆ – ಆ ವ್ಯಕ್ತಿಯ ಕುರಿತಲ್ಲವೆ? ತನ್ನ ಕಾಮದ ವಿಕಾರತೆಯನ್ನು ಮುಗ್ಧ, ಅಸಹಾಯಕ ಹೆಣ್ಣಿನ ಮೇಲೆ ಚೆಲ್ಲಿದ ಆತ ಇನ್ನಷ್ಟು ರಾಕ್ಷಸನಾದ. ಪದೇ ಪದೇ ಮನೆಗೆ ಬರಲಾರಂಭಿಸಿದ. ಹೆದರಿಸುವ ಚೀಟಿಗಳನ್ನು ಬರೆದು ಹಾಕಿ ಹೋಗುತ್ತಿದ್ದ. ಅವನ ಚೀಟಿಗಳನ್ನು ಅಪ್ಪ ಅಮ್ಮ ಮನೆಯವರು ನೋಡಿದರೆ? ಶಾಂತವಾಗಿದ್ದ ನನ್ನ ಬದುಕು ಕದಡಿಹೋಯಿತು. ನೆಮ್ಮದಿ ನಿದ್ದೆಯ ರಾತ್ರಿಗಳು ಕೈಕಾಲು ಕತ್ತರಿಸಿಕೊಂಡವು. ಎಲ್ಲದರಲ್ಲೂ ನಿರಾಸಕ್ತಿ, ಜುಗುಪ್ಸೆ, ಉಂಡ ಅನ್ನವೆಲ್ಲ ಹೊರಗೆ ಬರುವ ಹಾಗೆ...

ಚೈತ್ರ ಚೈತ್ರ ನನ್ನ ನಂಬು – ನಾನೆಷ್ಟು ಬಲಹೀನಳಾಗಿದ್ದೆ. ನಾನೆಷ್ಟು ಅಸಹಾಯಕಳಾಗಿದ್ದೆ. ಆ ದುಷ್ಟನ ಕ್ರೂರತೆಗೆ ಹೆದರಿ, ಹೆದರಿ ಮತ್ತೊಂದೆರಡು ಸಲ ತುಟಿಕಚ್ಚಿ ಹಿಂಸೆಯ ಸಹಿಸಿದೆ. ಈಗ